# ಕರ್ನಾಟಕ ಸರ್ಕಾರ

ಸಂ: ಡಿ.ವೈ.ಇ.ಎಸ್/ಕ್ರೀ.ಚ.ಪ್ರೋ/70/2023-24 ಆಯುಕ್ತರ ಕಾರ್ಯಾಲಯ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ,
ಬೆಂಗಳೂರು-01, ದಿನಾಂಕ:24-11-2023.

## ಸುತ್ತೋಲೆ

ವಿಷಯ: 2022ನೇ ಸಾಲಿನ ಜೀವಮಾನ ಸಾಧನೆ ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಳಿಗಾಗಿ ಪರಿಷ್ಕೃತ ಸರ್ಕಾರಿ ಆದೇಶದಂತೆ ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕವನ್ನು ಮುಂದುರೆಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:26-10-2023.
2) ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/171/2022 ; ಬೆಂಗಳೂರು, ದಿನಾಂಕ: 08.11.2023.
3) ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/169/2022 ; ಬೆಂಗಳೂರು, ದಿನಾಂಕ: 09.11.2023.

********

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

2022ನೇ ಸಾಲಿನ ಹಿರಿಯ ಕ್ರೀಡಾಪಟು/ತರಬೇತುದಾರರಾಗಿ ಸಾಧನೆ ಮಾಡಿರುವ ಕರ್ನಾಟಕದ ಹಿರಿಯ ಕ್ರೀಡಾಪಟುಗಳು/ ತರಬೇತುದಾರರುಗಳಿಂದ ಜೀವಮಾನ ಸಾಧನೆ ಪ್ರಶಸ್ತಿಗಾಗಿ ಸರ್ಕಾರಿ ಆದೇಶ ಸಂಖ್ಯೆ:ಯುಸೇಇ 357 ಯುಸೇಕ್ರೀ 2009, ಬೆಂಗಳೂರು, ದಿನಾಂಕ:17-04-2010 ರಂತೆ ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಾಗಿ ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 270 ಯುಸೇಕ್ರೀ 2014, ಬೆಂಗಳೂರು, ದಿನಾಂಕ:13-08-2014 ರಂತೆ ಸೇವಾಸಿಂಧು ಆನ್‌ಲೈನ್ (ವೆಬ್‌ಸೈಟ್: **https://sevasindhuservices.karnataka.gov.in**) ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:30-11-2023 ರಂದು ನಿಗದಿಪಡಿಸಿ ಉಲ್ಲೇಖ (1)ರಂತೆ ಅರ್ಜಿ ಆಹ್ವಾನಿಸಲಾಗಿತ್ತು.

ಸರ್ಕಾರಕ್ಕೆ ಸಲ್ಲಿಕೆಯಾಗಿದ್ದ ಜೀವಮಾನ ಸಾಧನೆ ಪ್ರಶಸ್ತಿ ಮತ್ತು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಳ ಮಾರ್ಗಸೂಚಿಗಳ ಪರಿಷ್ಕರಣೆಯು ಉಲ್ಲೇಖ (2) ಮತ್ತು (3) ರಂತೆ ಆದೇಶವಾಗಿರುತ್ತದೆ. (ಸರ್ಕಾರಿ ಆದೇಶಗಳ ಪ್ರತಿಗಳನ್ನು ಲಗತ್ತಿಸಿದೆ)

...2

ಮೇಲಿನ ಹೊಸ ಆದೇಶಗಳನ್ವಯ 2022ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿ ಮತ್ತು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಳಿಗಾಗಿ ಅರ್ಹ ಕ್ರೀಡಾಪಟುಗಳಿಂದ ಮರು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸುವ ದಿನಾಂಕವನ್ನು ಮುಂದುವರೆಸಿ, ದಿನಾಂಕ:08-12-2023ರ ಒಳಗಾಗಿ ಸೇವಾಸಿಂಧು ಆನ್‌ಲೈನ್ (ವೆಬ್‌ಸೈಟ್: **https://sevasindhuservices.karnataka.gov.in**) ಮೂಲಕ ಅರ್ಜಿ ಅರ್ಜಿಗಳನ್ನು ಸಲ್ಲಿಸುವುದು.

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ,

1. ಮಾನ್ಯ ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿಗಳು ಇವರಿಗೆ ಸಲ್ಲಿಸುತ್ತಾ, ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
2. ಉಪ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
3. ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
4. ಎಲ್ಲ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
5. ರಾಜ್ಯದ ಎಲ್ಲ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳು.
6. ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** "ಜೀವಮಾನ ಸಾಧನೆ ಪ್ರಶಸ್ತಿ" ನೀಡುವ ಕುರಿತು ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 357 ಯುಸೇಕ್ರೀ 2009 ; ದಿನಾಂಕ: 17/04/2010.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಡಿವೈಇಎಸ್/ ಕ್ರೀಚಪ್ರೊ/26/2023-24; ದಿನಾಂಕ:03.08.2023.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ಆದೇಶದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸಿ ಅಪ್ರತಿಮ ಸಾಧನೆ ಮಾಡಿದಂತಹ ಹಿರಿಯ ಕ್ರೀಡಾಪಟು/ ಹಿರಿಯ ತರಬೇತುದಾರರನ್ನು ಗೌರವಿಸಲು "ಜೀವಮಾನ ಸಾಧನೆ ಪ್ರಶಸ್ತಿ" ನೀಡಲು ತೀರ್ಮಾನಿಸಿ ಮಾರ್ಗಸೂಚಿಗಳನ್ನು ರೂಪಿಸಿ ಆದೇಶಿಸಲಾಗಿತ್ತು.

ಬದಲಾದ ಕಾಲಮಾನಕ್ಕೆ ತಕ್ಕಂತೆ ಸದರಿ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಅಗತ್ಯವಿದ್ದು, ಪ್ರಸ್ತುತ ಆರ್ಥಿಕ ಸ್ಥಿತಿಗತಿ ರಾಜ್ಯದ ಕ್ರೀಡಾ ಸಾಧನೆಯ ಬೆಳವಣಿಗೆ ಇತ್ಯಾದಿ ಅಂಶಗಳ ಹಿನ್ನಲೆಯಲ್ಲಿ ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/171/2022;**
**ಬೆಂಗಳೂರು, ದಿನಾಂಕ:8.11.2023.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಕ್ರೀಡಾ ಕ್ಷೇತ್ರದಲ್ಲಿ ತರಬೇತುದಾರರಾಗಿ ನಿರಂತರ ಸೇವೆ ಸಲ್ಲಿಸಿ ಅಪ್ರತಿಮ ಸಾಧನೆ ಮಾಡಿದಂತಹ ಹಿರಿಯ ತರಬೇತುದಾರರನ್ನು ಗೌರವಿಸಲು ನೀಡಲಾಗುವ "ಜೀವಮಾನ ಸಾಧನೆ ಪ್ರಶಸ್ತಿ"ಗೆ ಸಂಬಂಧಿಸಿದಂತೆ ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚಿಗಳನ್ನು ರದ್ದುಪಡಿಸಿ, ಈ ಆದೇಶದ ಅನುಬಂಧ-1ರಲ್ಲಿರುವಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಿ ಆದೇಶಿಸಲಾಗಿದೆ.

-2

ಮುಂದುವರೆದು, "ಜೀವಮಾನ ಸಾಧನೆ ಪ್ರಶಸ್ತಿ" ಪ್ರಶಸ್ತಿಗೆ ಪರಿಗಣಿಸಲಾಗುವ ಪ್ರತಿ ಕ್ರೀಡಾ ಸಾಧನೆಯ ಅಂಕಪಟ್ಟಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಜಯಶ್ರೀ ಎಸ್.ಎನ್.
**(ಜಯಶ್ರೀ ಎಸ್.ಎನ್.)**
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ)/(ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಆಯುಕ್ತರು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಎಲ್ಲಾ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ-(ಆಯುಕ್ತರು,ಯುಸಕ್ರೀ ಮೂಲಕ).
4. ಉಪ ನಿರ್ದೇಶಕರು, ಟಿಎನ್ ಎಂಸಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/171/2022; ದಿನಾಂಕ:8.11.2023ರ**

**ಅನುಬಂಧ-1**

**ಜೀವಮಾನ ಸಾಧನೆ ಪ್ರಶಸ್ತಿ ಮಾರ್ಗಸೂಚಿಗಳು-2023**

**ಪೀಠಿಕೆ:**

ಕ್ರೀಡಾ ಕ್ಷೇತ್ರದಲ್ಲಿ ನಿರಂತರ ಸೇವೆಗೈದ ಹಾಗೂ ಗಣನೀಯ ಸಾಧನೆ ಮಾಡಿದಂತಹ ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತದೆ.

**ಉದ್ದೇಶ:**

ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ/ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ರಾಜ್ಯ / ರಾಷ್ಟ್ರಕ್ಕೆ ಕೀರ್ತಿ ತಂದ ಕ್ರೀಡಾಪಟುಗಳನ್ನು ರೂಪಿಸಿದ ಹಾಗೂ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ತರಬೇತುದಾರರನ್ನು ಗುರುತಿಸಿ ಗೌರವಿಸುವುದು.

1. ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸುವವರು ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿ ಕ್ರೀಡಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರಬೇಕು.

2. ತರಬೇತುದಾರರು ನಾಯಕತ್ವದ ಗುಣ, ಕ್ರೀಡಾ ಮನೋಭಾವ ಮತ್ತು ಶಿಸ್ತು ಬದ್ಧ ಜೀವನಕ್ಕೆ ಮಾದರಿಯಾಗಿರಬೇಕು.

3. ಜೀವಮಾನ ಸಾಧನೆ ಪ್ರಶಸ್ತಿಗೆ ಕರ್ನಾಟಕ ಒಲಂಪಿಕ್ ಸಂಸ್ಥೆ, ವಿವಿಧ ಕ್ರೀಡೆಗಳ ರಾಜ್ಯ ಸಂಸ್ಥೆಗಳು, ಇಲಾಖೆಯ ಉಪ/ಸಹಾಯಕ ನಿರ್ದೇಶಕರುಗಳು ಶಿಫಾರಸ್ಸು ಮಾಡಬಹುದಾಗಿದೆ ಹಾಗೂ ಪ್ರಶಸ್ತಿಗೆ ಅರ್ಜಿಸಲ್ಲಿಸುವವರು ಕರ್ನಾಟಕದವರೇ ಆಗಿರಬೇಕು.

4. ಪ್ರತಿ ವರ್ಷ ಐವರು ಅರ್ಹ ತರಬೇತುದಾರರಿಗೆ ಮಾತ್ರ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು ಹಾಗೂ ಆಯ್ಕೆಯ ಅಂತಿಮ ನಿರ್ಧಾರ ರಾಜ್ಯ ಸರ್ಕಾರದ ಆಯ್ಕೆ ಸಮಿತಿಯದ್ದಾಗಿರುತ್ತದೆ.

5. ಈ ಪ್ರಶಸ್ತಿಯು ರೂ.3 ಲಕ್ಷ ನಗದು ಬಹುಮಾನ, ನೆನಪಿನ ಕಾಣಿಕೆ, ಪ್ರಮಾಣ ಪತ್ರ, ಶಾಲು, (ಪುರುಷರಿಗೆ ಪ್ಯಾಂಟು, ಶರ್ಟು, ಟೈ ಬ್ಲೇಜರ್, ಶೂ ಮತ್ತು ಮಹಿಳೆಯರಿಗೆ ಮೈಸೂರು ಸಿಲ್ಕ್ ಸೀರೆ, ಬ್ಲೇಜರ್, ಚಪ್ಪಲ್, ಸ್ಕೋಲ್ ಗಳನ್ನು ಒಳಗೊಂಡಿರುತ್ತದೆ.

6. ಈ ಪ್ರಶಸ್ತಿಗೆ ಏಕಲವ್ಯ ಪ್ರಶಸ್ತಿ ಅರ್ಜಿಗಳನ್ನು ಆಹ್ವಾನಿಸುವ ರೀತಿಯಲ್ಲಿಯೇ ಅರ್ಜಿ ಆಹ್ವಾನಿಸಲಾಗುವುದು ಹಾಗೂ ಏಕಲವ್ಯ ಪರಿಶೀಲನಾ ಮತ್ತು ಆಯ್ಕೆ ಸಮಿತಿ ಅಧ್ಯಕ್ಷರು/ಸದಸ್ಯರುಗಳು ಜೀವಮಾನ ಸಾಧನೆ ಪ್ರಶಸ್ತಿ ಆಯ್ಕೆ ನಡೆಸುವುದು.

7. ಕ್ರೀಡಾ ಕ್ಷೇತ್ರದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಪ್ರತಿ ವರ್ಷಅರ್ಜಿಗಳನ್ನು ಆಹ್ವಾನಿಸಲಾಗುವುದು.

8. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ತರಬೇತಿಗೊಳಿಸಿದ ಕರ್ನಾಟಕದ ತರಬೇತುದಾರರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

9. ರಾಷ್ಟ್ರೀಯ/ಅಂತಾರಾಷ್ಟ್ರೀಯ ಕ್ರೀಡೆಗಳು ನಡೆದ ಸಂದರ್ಭದಲ್ಲಿ ಭಾಗವಹಿಸಿದ ಕ್ರೀಡಾಪಟು ಹಾಗೂ ಸಂಬಂಧಿಸಿದ ತರಬೇತುದಾರರ ಬಗ್ಗೆ ಉದ್ದೀಪನ ಮದ್ದು ಸೇವನೆ ಆರೋಪ ಹಾಗೂ ಪ್ರಚೋದನೆ ಬಗ್ಗೆ NADA/WADA ತನಿಖಾ ವರದಿಯಲ್ಲಿ ಉಲ್ಲೇಖಿತವಾಗಿದ್ದಲ್ಲಿ ಅಂತಹ ತರಬೇತುದಾರರು ಈ ಪ್ರಶಸ್ತಿಗೆ ಅರ್ಹರಾಗಿರುವುದಿಲ್ಲ.

10. ಈ ಪ್ರಶಸ್ತಿಗೆ ತರಬೇತುದಾರರ ಅರ್ಹತೆಯನ್ನು ಪರಿಗಣಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುವುದು.

ಅ) ತರಬೇತುದಾರರು ತಮ್ಮ ತರಬೇತಿ ಅವಧಿಯಲ್ಲಿ ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳನ್ನು ಬೆಳಸಿರಬೇಕು.

ಆ) ಅಂತಾರ್ ರಾಷ್ಟ್ರೀಯ ಮಟ್ಟದ ಕ್ರೀಡೆಗಳಾದ ಒಲಂಪಿಕ್ ಕ್ರೀಡೆಗಳು, ವಿಶ್ವ ಚಾಂಪಿಯನ್ ವಿಶ್ವ ಕಪ್ ಕ್ರೀಡೆಗಳಲ್ಲಿ ಭಾಗವಹಿಸಿ ಕರ್ನಾಟಕವನ್ನು ಪ್ರತಿನಿಧಿಸಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ಸಾಧನೆಯಾಗಿರಬೇಕು.

ಇ) ಗುಂಪು ಕ್ರಿಡೆಗಳಲ್ಲಿ ತರಬೇತುದಾರರು ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಕರ್ನಾಟಕವನ್ನು ಪ್ರತಿನಿಧಿಸಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ಸಾಧನೆ ಪರಿಗಣಿಸಲಾಗುವುದು.

ಈ) ಕನಿಷ್ಠ ಪಕ್ಷ 20 ವರ್ಷ ತರಬೇತುದಾರರಾಗಿ ಸೇವೆ ಸಲ್ಲಿಸಿರಬೇಕು.

11. **ಪರಿಶೀಲನಾ ಸಮಿತಿ:-**

1. ಜೀವಮಾನದ ಸಾಧನೆ ಪ್ರಶಸ್ತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಲು ಸರ್ಕಾರವು ಖೇಲ್ ರತ್ನ/ದ್ರೋಣಾಚಾರ್ಯ/ಅರ್ಜುನ ಪ್ರಶಸ್ತಿ ವಿಜೇತ, ಅಂತಾರಾಷ್ಟ್ರೀಯ ಕ್ರೀಡಾಪಟು ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಪರಿಶೀಲನಾ ಸಮಿತಿ ರಚಿಸತಕ್ಕದ್ದು. ಈ ಸಮಿತಿಯಲ್ಲಿರುವ ಅಧಿಕಾರತೇರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ. 2021ನೇ ಸಾಲಿನ ಸರ್ಕಾರದ ಆದೇಶದಂತೆ ರಚಿಸಲಾದ ಪರಿಶೀಲನಾ ಸಮಿತಿ:

| ಕ್ರ.ಸಂ. | ವಿವರ | ಪದನಾಮ |
|---|---|---|
| 1 | ಖೇಲ್ ರತ್ನ/ದ್ರೋಣಾಚಾರ್ಯ /ಅರ್ಜುನ ಪ್ರಶಸ್ತಿ ವಿಜೇತ, ಅಂತಾರಾಷ್ಟ್ರೀಯ ಕ್ರೀಡಾಪಟು | -ಅಧ್ಯಕ್ಷರು |
| 2 | ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ | ಉಪಾಧ್ಯಕ್ಷರು |
| 3 | ಅರ್ಜುನ ಪ್ರಶಸ್ತಿ ವಿಜೇತ, ಅಂತಾರಾಷ್ಟ್ರೀಯ ಕ್ರೀಡಾಪಟು | -ಸದಸ್ಯರು |
| 4 | ಅಧ್ಯಕ್ಷರು, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ | -ಸದಸ್ಯರು |
| 5 | ಅಧ್ಯಕ್ಷರು, ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ | -ಸದಸ್ಯರು |
| 6 | ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರತಿನಿಧಿ | -ಸದಸ್ಯರು |
| 7 | ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | -ಸದಸ್ಯ ಕಾರ್ಯದರ್ಶಿ |

2. ಆಯಾ ಕ್ರೀಡೆಯ ಜೀವಮಾನದ ಸಾಧನೆ ಪ್ರಶಸ್ತಿ ಪುರಸ್ಕೃತ ತರಬೇತುದಾರರು/ನಿವೃತ್ತ/ ಹಿರಿಯ ಕ್ರೀಡಾಪಟುಗಳನ್ನು ಪರಿಶೀಲನಾ ಸಮಿತಿ ಸಮಯದಲ್ಲಿ ಅಗತ್ಯತೆ ಕಂಡುಬಂದಾಗ ಆಹ್ವಾನಿಸಿ ಸಲಹೆ ಪಡೆಯಬಹುದು. ಈ ಆಹ್ವಾನಿತರ ನೇಮಕವನ್ನು ನಿರ್ದೇಶಕರು/ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು, ಈ ಆಹ್ವಾನಿತರು ನೀಡುವ ಸಲಹೆಯನ್ನು ದಾಖಲಿಸತಕ್ಕದ್ದು. ಆದರೆ ಅಂತಿಮ ನಿರ್ಧಾರ ಪರಿಶೀಲನಾ ಸಮಿತಿಯ ಸದಸ್ಯರದ್ದೇ ಆಗಿರತಕ್ಕದ್ದು.

12. ಜೀವಮಾನದ ಸಾಧನೆ ಪ್ರಶಸ್ತಿಯ ಆಯ್ಕೆಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿ ರಚಿಸತಕ್ಕದ್ದು. ಈ ಸಮಿತಿಯಲ್ಲಿರುವ ಅಧಿಕಾರೇತರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

| ಕ್ರ.ಸಂ. | ವಿವರ | ಪದನಾಮ |
|---|---|---|
| 1 | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, | ಅಧ್ಯಕ್ಷರು |
| 2 | ಖೇಲ್ ರತ್ನ/ದ್ರೋಣಾಚಾರ್ಯ /ಅರ್ಜುನ ಪ್ರಶಸ್ತಿ ವಿಜೇತ, ಅಂತಾರಾಷ್ಟ್ರೀಯ ಕ್ರೀಡಾಪಟು | ಸದಸ್ಯರು |
| 3 | ಅರ್ಜುನ ಪ್ರಶಸ್ತಿ ವಿಜೇತ, ಅಂತಾರಾಷ್ಟ್ರೀಯ ಕ್ರೀಡಾಪಟು | ಸದಸ್ಯರು |
| 4 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, | ಸದಸ್ಯರು |
| 5 | ಅಧ್ಯಕ್ಷರು, ಕರ್ನಾಟಕ ಕ್ರೀಡಾ ಒಲಂಪಿಕ್ ಸಂಸ್ಥೆ, ಬೆಂಗಳೂರು | ಸದಸ್ಯರು |
| 6 | ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರತಿನಿಧಿ | ಸದಸ್ಯರು |
| 7 | ಅಧ್ಯಕ್ಷರು, ಕರ್ನಾಟಕ ಕ್ರೀಡಾ ಸ್ವಿಮ್ಮಿಂಗ್ ಅಸೋಸಿಯೇಷನ್, ಬೆಂಗಳೂರು | ಸದಸ್ಯರು |
| 8 | ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, | ಸದಸ್ಯ ಕಾರ್ಯದರ್ಶಿಗಳು |

(ಜಯಶ್ರೀ ಎಸ್.ಎನ್.)
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

## ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/171/2022; ದಿನಾಂಕ:8.11.2023ರ

## ಅನುಬಂಧ-2

ಕ್ರೀಡಾ ಕ್ಷೇತ್ರದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆ ಮಾಡಲು ಪರಿಗಣಿಸಲಾಗುವ ಅಂಕಪಟ್ಟಿ:-

| Sl. No. | EVENT | AS A PLAYER | | | | AS A COACH | | | | AS A TEAM COACH | | | |
|---|---|---|---|---|---|---|---|---|---|---|---|---|---|
| | | G | S | B | P | G | S | B | P | G | S | B | P |
| | **PREFERENCE-I** | | | | | | | | | | | | |
| 1 | Olympic / Paralympics | 1000 | 950 | 900 | 850 | 1000 | 950 | 900 | 850 | 1000 | 950 | 900 | 850 |
| 2 | World Cup/ Para World Cup | 850 | 800 | 750 | 700 | 850 | 800 | 750 | 700 | 850 | 800 | 750 | 700 |
| 3 | World Championship/Para World Championships (Olympic/Asian/Commonwealth Games Sports disciplines only) | 700 | 650 | 600 | 550 | 700 | 650 | 600 | 550 | 700 | 650 | 600 | 550 |
| 4 | Asian Games/ Para Asian Games | 550 | 500 | 450 | 400 | 550 | 500 | 450 | 400 | 550 | 500 | 450 | 400 |
| 5 | Common Wealth Games / Para Commonwealth Games | 400 | 350 | 300 | 250 | 400 | 350 | 300 | 250 | 400 | 350 | 300 | 250 |
| 6 | Asian Championships (Olympic/Asian/Commonwealth Games Sports disciplines only) | 300 | 280 | 260 | 240 | 300 | 280 | 260 | 240 | 300 | 280 | 260 | 240 |
| 7 | Commonwealth Championship | 260 | 240 | 220 | 200 | 260 | 240 | 220 | 200 | 260 | 240 | 220 | 200 |
| | **PREFERENCE-II** | | | | | | | | | | | | |
| 1 | Youth Olympic / Para Youth Olympic | 1000 | 950 | 900 | 850 | 1000 | 950 | 900 | 850 | 1000 | 950 | 900 | 850 |
| 2 | Junior/Youth World Cup | 850 | 800 | 750 | 700 | 850 | 800 | 750 | 700 | 850 | 800 | 750 | 700 |
| 3 | Sub Junior/Junior/Cadet/Youth World Championship | 700 | 650 | 600 | 550 | 700 | 650 | 600 | 550 | 700 | 650 | 600 | 550 |
| 4 | Sub Junior/ Cadet/ Junior/Youth Asian Games/ Para Asian Games | 550 | 500 | 450 | 400 | 550 | 500 | 450 | 400 | 550 | 500 | 450 | 400 |
| 5 | Junior/ Youth Commonwealth Games / Para Commonwealth Games | 400 | 350 | 300 | 250 | 400 | 350 | 300 | 250 | 400 | 350 | 300 | 250 |
| 6 | Sub Junior/ Cadet/ Junior/Youth Asian Championships (Asian Games disciplines only) | 300 | 280 | 260 | 240 | 300 | 280 | 260 | 240 | 300 | 280 | 260 | 240 |
| 7 | Junior/ Youth Commonwealth Championship | 260 | 240 | 220 | 200 | 260 | 240 | 220 | 200 | 260 | 240 | 220 | 200 |
| Sl. No. | EVENT | AS A PLAYER | | | | AS A COACH | | | | AS A TEAM COACH | | | |
| | | G | S | B | P | G | S | B | P | G | S | B | P |
| | **PREFERENCE-III** | | | | | | | | | | | | |
| 1 | Grand Slam/Grand Master / Grand prix | 500 | 450 | 400 | 350 | 500 | 450 | 400 | 350 | 500 | 450 | 400 | 350 |
| 2 | AFRO- Asian Games | 400 | 350 | 300 | 250 | 400 | 350 | 300 | 250 | 400 | 350 | 300 | 250 |
| 3 | S.A.F. Games | 300 | 280 | 260 | 240 | 300 | 280 | 260 | 240 | 300 | 280 | 260 | 240 |
| 4 | Official International Meet/ Championship being part of National Team officially sponsored by MYA & S, Government of India | 260 | 240 | 220 | 200 | 260 | 240 | 220 | 200 | 260 | 240 | 220 | 200 |

**PREFERENCE-IV**

| | | | | | | | | | | | | | |
|---|---|---|---|---|---|---|---|---|---|---|---|---|---|
| 1 | National Games | 180 | 160 | 140 | 120 | 180 | 160 | 140 | 120 | 180 | 160 | 140 | 120 |
| 2 | Senior National Championship | 100 | 80 | 60 | 40 | 100 | 80 | 60 | 40 | 100 | 80 | 60 | 40 |
| 3 | All India Inter University / Khelo India University Games | 80 | 60 | 40 | 20 | 80 | 60 | 40 | 20 | 80 | 60 | 40 | 20 |
| 4 | Junior / Cadet / Sub Junior National / Khelo India Championship | 60 | 40 | 20 | 10 | 60 | 40 | 20 | 10 | 60 | 40 | 20 | 10 |
| 5 | Senior Nationals which are not part of Olympic/Asian/Commonwealth Games Sports disciplines and corresponding Para Sports | 40 | 30 | 20 | 10 | 40 | 30 | 20 | 10 | 40 | 30 | 20 | 10 |
| 6 | Junior Nationals which are not part of Olympic/Asian/Commonwealth Games Sports disciplines and corresponding Para Sports | 30 | 20 | 10 | 05 | 30 | 20 | 10 | 05 | 30 | 20 | 10 | 05 |

(ಜಯಶ್ರೀ ಎಸ್.ಎನ್.)
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
8/11/23

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** "ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ" ನೀಡುವ ಕುರಿತು ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 270 ಯುಸೇಕ್ರೀ 2014; ದಿನಾಂಕ: 13.08.2014.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಡಿವೈಇಎಸ್ /ಕ್ರೀಚಪ್ರೊ/27/2023-24; ದಿನಾಂಕ:03.08.2023.

*****

**ಪ್ರಸ್ತಾವನೆ:**

ಜಾನಪದ ಕ್ರೀಡೆಗಳಾದ ಕಂಬಳ, ಕುಸ್ತಿ, ಆಟ್ಯಾ-ಪಾಟ್ಯ ಇತ್ಯಾದಿ ಕ್ರೀಡೆಗಳಲ್ಲಿ ಕೀರ್ತಿ ಗಳಿಸಿದವರನ್ನು ಗುರುತಿಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಹಾಗೂ ರಾಜ್ಯದಲ್ಲಿ ಗ್ರಾಮೀಣ ಕ್ರೀಡೆಯ ಅಭಿವೃದ್ಧಿಗಾಗಿ ಸ್ಥಳೀಯ ಮತ್ತು ಪಾರಂಪರಿಕೆ ಕ್ರೀಡೆಗಳಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಲು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಲು ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಬದಲಾದ ಕಾಲಮಾನಕ್ಕೆ ತಕ್ಕಂತೆ ಸದರಿ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಅಗತ್ಯವಿದ್ದು, ಪ್ರಸ್ತುತ ಆರ್ಥಿಕ ಸ್ಥಿತಿಗತಿ ರಾಜ್ಯದ ಕ್ರೀಡಾ ಸಾಧನೆಯ ಬೆಳವಣಿಗೆ ಇತ್ಯಾದಿ ಅಂಶಗಳ ಹಿನ್ನಲೆಯಲ್ಲಿ ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸದರಿ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸಬಲೀಕರಣ ಮತ್ತು ಕ್ರೀಡಾ ನಿರ್ದೇ...
ಸಂಖ್ಯೆ: 1844
ದಿನಾಂಕ: 13/11/2023
ಬೆಂಗಳೂರು

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/169/2022**
**ಬೆಂಗಳೂರು, ದಿನಾಂಕ:09.11.2023.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿ, ಗ್ರಾಮೀಣ ಕ್ರೀಡೆಯ ಅಭಿವೃದ್ಧಿಗಾಗಿ ಸ್ಥಳೀಯ ಮತ್ತು ಪಾರಂಪರಿಕೆ ಕ್ರೀಡೆಗಳಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಲು ನೀಡಲಾಗುವ **"ಕರ್ನಾಟಕ ಕ್ರೀಡಾರತ್ನ"** ಪ್ರಶಸ್ತಿಗೆ ಸಂಬಂಧಿಸಿದಂತೆ ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ರೂಪಿಸಲಾದ ಮಾರ್ಗಸೂಚಿ/ಪರಿಶೀಲನಾ ಸಮಿತಿ/ಆಯ್ಕೆ ಸಮಿತಿ/ಕ್ರೀಡಗಳ ಪಟ್ಟಿ ಮತ್ತು ಅಂಕಪಟ್ಟಿಯನ್ನು ರದ್ದುಪಡಿಸಿ ಈ ಆದೇಶದ ಅನುಬಂಧ-1ರಲ್ಲಿರುವ ಪರಿಷ್ಕೃತ ಮಾರ್ಗಸೂಚಿ/ಪರಿಶೀಲನಾ ಸಮಿತಿ/ಆಯ್ಕೆ ಸಮಿತಿಗೆ ಸರ್ಕಾರದ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮುಂದುವರೆದು, **"ಕರ್ನಾಟಕ ಕ್ರೀಡಾರತ್ನ"** ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡೆಗಳ ವಿವರಗಳನ್ನು ಅನುಬಂಧ-2ರಲ್ಲಿ ಹಾಗೂ ಪ್ರತಿ ಕ್ರೀಡಾ ಸಾಧನೆಯ ಅಂಕಪಟ್ಟಿಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಜಯಶ್ರೀ ಎಸ್.ಎನ್.
**(ಜಯಶ್ರೀ ಎಸ್.ಎನ್.)**
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ)/(ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಆಯುಕ್ತರು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಎಲ್ಲಾ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ-(ಆಯುಕ್ತರು,ಯುಸಕ್ರೀ ಮೂಲಕ).
4. ಉಪ ನಿರ್ದೇಶಕರು, ಟಿಎನ್ ಎಂಸಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/169/2022;**
**ದಿನಾಂಕ:09.11.2023ರ ಅನುಬಂಧ-1**
**ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಯ ಪರಿಷ್ಕೃತ ಮಾರ್ಗಸೂಚಿಗಳು-2023**

1. **ಪ್ರಸ್ತಾವನೆ:**

ಕರ್ನಾಟಕ ರಾಜ್ಯದ ಗ್ರಾಮೀಣ ಕ್ರೀಡೆಗಳಿಗೆ ಮತ್ತು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ 'ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗುವುದು.

2. **ಉದ್ದೇಶ:**

ರಾಜ್ಯದಲ್ಲಿ ಗ್ರಾಮೀಣ ಕ್ರೀಡೆಯ ಅಭಿವೃದ್ಧಿಗಾಗಿ ಸ್ಥಳೀಯ ಮತ್ತು ಪಾರಂಪರಿಕ ಕ್ರೀಡೆಗಳಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುವುದು.

3. **ಪರಿಭಾಷೆ:**

ಈ ಮಾರ್ಗಸೂಚಿಗಳಲ್ಲಿ ಸಂದರ್ಭ ಅನ್ಯತಾ ಅಗತ್ಯಪಡಿಸಿದ ಹೊರತು

ಅ) ಕ್ರೀಡೆ: ಅನುಬಂಧ-2ರಲ್ಲಿ ಕಾಣಿಸಿರುವ ಕ್ರೀಡೆಗಳು

ಆ) ಸರ್ಕಾರ: ಕರ್ನಾಟಕ ಸರ್ಕಾರ

ಇ) ಇಲಾಖೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಈ) ವರ್ಷ: ಕ್ಯಾಲೆಂಡರ್ ವರ್ಷ ಜನವರಿ 1ರಿಂದ ಡಿಸೆಂಬರ್ 31ರ ವರೆಗೆ

ಉ) ಪ್ರಶಸ್ತಿ: ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ

ಊ) ಸಮಿತಿ ಕರ್ನಾಟಕ ಕ್ರೀಡಾ ರತ್ನ ಆಯ್ಕೆ ಸಮಿತಿ/ಪರಿಶೀಲನಾ ಸಮಿತಿ

4. **ಅರ್ಜಿ ಸ್ವೀಕಾರ:**

ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಈ ಕೆಳಕಾಣಿಸಿದ ಇಲಾಖೆ, ಸಂಘ-ಸಂಸ್ಥೆಗಳ ಮೂಲಕ ಅರ್ಜಿ ಸ್ವೀಕರಿಸಲಾಗುವುದು
ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಆ) ಕ್ರೀಡಾ ಸಂಘ/ ಸಂಸ್ಥೆಗಳು

**5. ಅರ್ಜಿ ಸಲ್ಲಿಸುವ ವಿಧಾನ**

5.1 ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ನೊಂದಣಿ ಅಂಚೆ/ಖುದ್ದಾಗಿ/ಆನ್ ಲೈನ್ (Online) ಮೂಲಕ ಸರ್ಕಾರಿ ರಜಾದಿನಗಳನ್ನು ಹೊರತು ಪಡಿಸಿ ಕಛೇರಿಯ ವೇಳೆಯಲ್ಲಿ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

5.2 ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ತುಂಬತಕ್ಕದ್ದು.

5.3 ಖೋ-ಖೋ, ಥ್ರೋಬಾಲ್, ಆಟ್ಯಾ ಪಾಟ್ಯಾ, ಮಲ್ಲಕಂಬ, ಯೋಗ, ಕುಸ್ತಿ ಮತ್ತು ಕಬಡ್ಡಿ ಕ್ರೀಡೆಗಳಿಗೆ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.4 ಮಲ್ಲಕಂಬ, ಗುಂಡು ಎತ್ತುವುದು ದೊಣ್ಣೆವರಸೆ, ಕಂಬಳ, ಸಂಗ್ರಾಣಿ ಕಲ್ಲು ಎತ್ತುವುದು ಮತ್ತು ಎತ್ತಿನಗಾಡಿ ಸ್ಪರ್ಧೆ ಮುಂತಾದ ಸ್ಥಳೀಯ ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿದ ಬಗ್ಗೆ ಪ್ರಮಾಣ ಪತ್ರ, ಪ್ರಶಸ್ತಿ ಪತ್ರ, ಛಾಯಾಚಿತ್ರ, ಪೇಪರ್ ಕಟಿಂಗ್, ಕ್ರೀಡೆ ನಡೆದ ದಿನಾಂಕ, ಸ್ಥಳ ಮತ್ತು ಸಾಧನೆಗಳನ್ನು ಸ್ಥಳೀಯ ಕ್ರೀಡಾಕೂಟ ಸಂಘಟಕರಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.

5.5 ಅರ್ಜಿಯೊಂದಿಗೆ ಸಲ್ಲಿಸುವ ಕ್ರೀಡಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

5.6 ಈ ಸ್ವಯಂ ಮೌಲ್ಯಮಾಪನ ಪತ್ರದಲ್ಲಿ ಕ್ರೀಡಾಪಟು ಪ್ರಶಸ್ತಿಗಾಗಿ ದಾಖಲಿಸಿರುವ ಕಳೆದ 5 ವರ್ಷಗಳಲ್ಲಿ ಪ್ರಮುಖ 3 ಸಾಧನೆಗಳ ವಿವರಗಳನ್ನು ತುಂಬಿ ನಿಗದಿತ ಅಂಕಗಳನ್ನು ಗುರುತಿಸುವುದು.

**6. ಅರ್ಹತೆ:**

6.1 ಖೋ-ಖೋ, ಥ್ರೋಬಾಲ್, ಆಟ್ಯಾಪಾಟ್ಯಾ, ಮಲ್ಲಂಕಂಬ, ಯೋಗ, ಕುಸ್ತಿ ಮತ್ತು ಕಬಡ್ಡಿ ಕ್ರೀಡೆಗಳಿಗೆ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು.

6.2 ಅಂಗೀಕೃತ ಕ್ರೀಡಾ ಫೆಡರೇಷನ್ ಗಳಿಲ್ಲದ ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕ್ರೀಡಾಪಟುಗಳ 5 ವರ್ಷದ ಸಾಧನೆಯನ್ನು ಪರಿಗಣಿಸಲಾಗುವುದು.

6.3 ಭಿನ್ನಸಾಮರ್ಥ್ಯದ ಕ್ರೀಡಾಪಟುಗಳು ಕಳೆದ 5 ವರ್ಷಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು.

6.4 ಈ ಹಿಂದೆ ಏಕಲವ್ಯ ಪ್ರಶಸ್ತಿಗಳನ್ನು ಪಡೆದವರು ಈ ಪ್ರಶಸ್ತಿಯನ್ನು ಪಡೆಯಲು ಅರ್ಹರಿರುವುದಿಲ್ಲ.
6.5 ಕರ್ನಾಟಕ ನಿವಾಸಿಗಳಲ್ಲದ ಹಾಗೂ ರಾಜ್ಯವನ್ನು ಪ್ರತಿನಿಧಿಸದೇ ಇರುವ ಕ್ರೀಡಾಪಟುಗಳು ಈ ಪ್ರಶಸ್ತಿಗೆ ಅರ್ಹರಾಗಿರುವುದಿಲ್ಲ.

6.6 ಕ್ರಿಮಿನಲ್ ಹಿನ್ನೆಲೆ ಇಲ್ಲ ಎಂಬ ಬಗ್ಗೆ ಪೊಲೀಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

7: **ಪ್ರಶಸ್ತಿ:** ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯು ಪ್ರಮಾಣ ಪತ್ರ, ಶಾಲು, (ಪುರುಷರಿಗೆ ಪ್ಯಾಂಟು, ಶರ್ಟು, ಟೈ ಬ್ಲೇಜರ್, ಶೂ ಮತ್ತು ಮಹಿಳೆಯರಿಗೆ ಮೈಸೂರು ಸಿಲ್ಕ್ ಸೀರೆ, ಬ್ಲೇಜರ್, ಚಪ್ಪಲ್, ಸ್ಕೋಲ್, ನಗದು ಬಹುಮಾನ- ರೂ 2,00,000/- ಗಳನ್ನು ಒಳಗೊಂಡಿರುತ್ತದೆ.

8. ಕ್ರೀಡಾಪಟು ಅರ್ಜಿಸಲ್ಲಿಸಿದ ನಂತರ ಮರಣ ಹೊಂದಿದಲ್ಲಿ ಆ ಕ್ರೀಡಾಪಟು ಪ್ರಶಸ್ತಿಗೆ ಅರ್ಹರಾಗಿದ್ದಲ್ಲಿ ಮರಣೋತ್ತರ ಪ್ರಶಸ್ತಿಗೆ ಪರಿಗಣಿಸಲಾಗುವುದು.

9. **ಅನರ್ಹತೆ:** ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸಲಾಗುವುದು ಹಾಗೂ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

10. **ಪ್ರಶಸ್ತಿಯನ್ನು ರದ್ದುಗೊಳಿಸುವುದು:-** ಸರ್ಕಾರವು ನೀಡಲಾದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಗೊಳಿಸಬಹುದಾಗಿರುತ್ತದೆ.

1) ಸುಳ್ಳು (ನಕಲಿ) ಪ್ರಮಾಣ ಪತ್ರ ಸಲ್ಲಿಸಿರುವುದು ದೃಢಪಟ್ಟಲ್ಲಿ.
2)ಪ್ರಶಸ್ತಿ ನೀಡಿದ ನಂತರದಲ್ಲಿ ಯಾವುದೇ ಮೂಲಗಳಿಂದ ಮಾಹಿತಿ ದೊರಕಿ ವಿಚಾರಣೆ/ತನಿಖೆಗೆ ಒಳಪಟ್ಟು ಸಲ್ಲಿಸಿದ ದಾಖಲೆಗಳು ತಪ್ಪೆಂದು ತಿಳಿದುಬಂದಲ್ಲಿ ಪ್ರಶಸ್ತಿಯನ್ನು ಹಿಂದಕ್ಕೆ ಪಡೆಯಲಾಗುವುದು ಹಾಗೂ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

11. ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿರುವ ಕ್ರೀಡಾಪಟುಗಳು ಈ ಪ್ರಶಸ್ತಿಯ ನೀತಿ ನಿಯಮಗಳನ್ನು ಒಪ್ಪಿಕೊಳ್ಳತಕ್ಕದ್ದು.

12. ಪ್ರಶಸ್ತಿಯ ಸಂಖ್ಯೆ: ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಪುರುಷ ಹಾಗೂ ಮಹಿಳೆಯರು ಮತ್ತು ಓರ್ವ ವಿಕಲಚೇತನ ಕ್ರೀಡಾಪಟು ಸೇರಿದಂತೆ ಪ್ರತಿ ಕ್ರೀಡೆಗೆ ಒಂದರಂತೆ (ವಿಶಿಷ್ಟ ಕ್ರೀಡೆಗಳಲ್ಲಿ ವರ್ಷಕ್ಕೆ 3 ಪ್ರಶಸ್ತಿ) 15 ಕ್ರೀಡಾಪಟುಗಳಿಗೆ ಮಾತ್ರ ಪ್ರಶಸ್ತಿಯನ್ನು ನೀಡತಕ್ಕದ್ದು.

13. ಖೋ-ಖೋ , ಥ್ರೋಬಾಲ್, ಕಬಡ್ಡಿ, ಆಟ್ಯಾ-ಪಾಟ್ಯಾ, ಮಲ್ಲಕಂಬ, ಮಟ್ಟಿ ಕುಸ್ತಿ/ಜಂಗಿ ಕುಸ್ತಿ ಕ್ರೀಡೆಗಳಿಗೆ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಾಧನೆಗಳನ್ನು ಪರಿಗಣಿಸಲಾಗುವುದು.

14. ಮಲ್ಲಕಂಬ, ಗುಂಡು ಎತ್ತುವುದು, ದೋಣಿ ವರಸೆ, ಕಂಬಳ, ಸಂಗ್ರಾಣಿ ಕಲ್ಲು ಎತ್ತುವುದು,

ಮತ್ತು ಎತ್ತಿನಗಾಡಿ ಸ್ಪರ್ಧೆ ಮುಂತಾದ ಸ್ಥಳೀಯ ಜನಪ್ರಿಯ ಗ್ರಾಮೀಣ ಕ್ರೀಡೆಗಳಿಗೆ ಐದು ವರ್ಷಗಳ ಸಾಧನೆಯನ್ನು ಪರಿಗಣಿಸಲಾಗುವುದು.

15. **ಪರಿಶೀಲನಾ ಸಮಿತಿ:**

| ಕ್ರ.ಸಂ. | ವಿವರ | ಪದನಾಮ |
|---|---|---|
| 1 | ಆಯುಕ್ತರು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2 | ಅರ್ಜುನ ಪ್ರಶಸ್ತಿ ವಿಜೇತರು, ರಾಜ್ಯ/ರಾಷ್ಟ್ರ ಕ್ರೀಡಾಪಟು | ಸದಸ್ಯರು |
| 3 | ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ | ಸದಸ್ಯರು |
| 4 | ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರತಿನಿಧಿ | ಸದಸ್ಯರು |
| 5 | ರಾಜ್ಯ ಆಟ್ಯ-ಪಾಟ್ಯ ಅಸೋಸಿಯೇಷನ್ ಪ್ರತಿನಿಧಿ | ಸದಸ್ಯರು |
| 6 | ಭಾರತೀಯ ಶೈಲಿಯ ಕುಸ್ತಿ ಸಂಘದ ಪ್ರತಿನಿಧಿ | ಸದಸ್ಯರು |
| 7 | ಜಂಟಿ ನಿರ್ದೇಶಕರು,.ಯುವ ಸಬಲೀಕರಣ ಕ್ರೀಡಾ ಇಲಾಖೆ | ಸದಸ್ಯ ಕಾರ್ಯದರ್ಶಿ |

**16. ಆಯ್ಕೆ ಸಮಿತಿ:**

| ಕ್ರ. ಸಂ. | ವಿವರ | ಪದನಾಮ |
|---|---|---|
| 1 | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ಕರ್ನಾಟಕ ಸರ್ಕಾರ ಬೆಂಗಳೂರು. | ಅಧ್ಯಕ್ಷರು |
| 2 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು |
| 3 | ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ | ಸದಸ್ಯರು |
| 4 | ಅರ್ಜುನ ಪ್ರಶಸ್ತಿ ವಿಜೇತರು(ಇಬ್ಬರು) | ಸದಸ್ಯರು |
| 5 | ರಾಜ್ಯ ಆಟ್ಯ-ಪಾಟ್ಯ ಅಸೋಸಿಯೇಷನ್ ಪ್ರತಿನಿಧಿ | ಸದಸ್ಯರು |
| 6 | ಭಾರತೀಯ ಶೈಲಿ ಕುಸ್ತಿ ಸಂಘದ ಪ್ರತಿನಿಧಿ | ಸದಸ್ಯರು |
| 7 | ಆಯುಕ್ತರು, ಯುವ ಸಬಲೀಕರಣ ಕ್ರೀಡಾ ಇಲಾಖೆ | ಸದಸ್ಯ ಕಾರ್ಯದರ್ಶಿ |

ಜಯಶ್ರೀ ಎಸ್.ಎನ್.

**(ಜಯಶ್ರೀ ಎಸ್.ಎನ್.)**
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

<u>**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/169/2022; ದಿನಾಂಕ:09.11.2023ರ**</u>

**ಅನುಬಂಧ-2**

ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡೆಗಳ ಪಟ್ಟಿ

1. ಖೋ-ಖೋ
2. ಕಬಡ್ಡಿ
3. ಥ್ರೋಬಾಲ್
4. ಆಟ್ಯಾ-ಪಾಟ್ಯಾ
5. ಮಲ್ಲಕಂಬ
6. ಬಾಲ್ ಬ್ಯಾಡ್ಮಿಂಟನ್
7. ಯೋಗ
8. ಗುಂಡು ಎತ್ತುವುದು
9. ದೋಣಿ ವರಸೆ
10. ಮಟ್ಟಿ ಕುಸ್ತಿ/ಜಂಗಿ ಕುಸ್ತಿ
11. ಟೆನ್ನಿಕಾಯ್ಟ್
12. ಕೇರಂ
13. ವಿಶಿಷ್ಟ ಕ್ರೀಡೆಗಳಲ್ಲಿ ಸಾಧನೆ (ಸಾಂಸ್ಕೃತಿಕ ಮತ್ತು ಜಾನಪದ)

    (1)ಸಂಗ್ರಾಣಿ ಕಲ್ಲು ಎತ್ತುವುದು
    (2) ಎತ್ತಿನಗಾಡಿ ಸ್ಪರ್ಧೆ
    (3) ಕಂಬಳ

ಜಯಶ್ರೀ ಎಸ್.ಎನ್.

**(ಜಯಶ್ರೀ ಎಸ್.ಎನ್.)**
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/169/2022; ದಿನಾಂಕ:09.11.2023ರ

ಅನುಬಂಧ-3

ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಗೆ ಆಯ್ಕೆ ಮಾಡಲು ಪರಿಗಣಿಸಲಾಗುವ ಅಂಕಪಟ್ಟಿ:-

| Sl.No. | Particulars | Participation | Gold | Silver | Bronze |
|---|---|---|---|---|---|
| 1 | World Cup / Championship | 90 | 100 | 90 | 70 |
| 2 | Asian Games | 80 | 90 | 80 | 60 |
| 3 | Commonwealth Games | 70 | 80 | 70 | 55 |
| 4 | Asian Championship | 60 | 70 | 60 | 50 |
| 5 | Commonwealth Championship | 50 | 60 | 50 | 40 |
| 6 | S.A.F. Games | 40 | 55 | 45 | 35 |
| 7 | Others (International) | 35 | 45 | 35 | 30 |
| 8 | National Games | 30 | 40 | 30 | 20 |
| 9 | Sr. National/Inter State/Inter Zone/Federation | 25 | 30 | 20 | 15 |
| 10 | All India Inter University Games | 15 | 20 | 15 | 10 |
| 11 | Juniors / S.G.F.I. | 10 | 12 | 10 | 8 |
| 12 | South Zone Competitions | 8 | 10 | 8 | 6 |
| 13 | State Level Senior Competitions recognized by State Associations | 5 | 8 | 6 | 5 |
| 14 | State Level Junior/Sub Junior/Mini Competitions recognized by Education department and State Associations | 3 | 5 | 4 | 3 |

ಜಯಶ್ರೀ ಎಸ್.ಎನ್.

(ಜಯಶ್ರೀ ಎಸ್.ಎನ್.)

ಸರ್ಕಾರದ ಉಪ ಕಾರ್ಯದರ್ಶಿ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.